ಈ) ತುಯಲಹಳ್ಳಿ ಪಾಳ್ಯದಲ್ಲಿ ಹೆಚ್ಚು ಫಲಾನುಭವಿಗಳು ಇರುತ್ತಾರೆ. ಆದರೆ ಅಂಗನವಾಡಿ ಕೇಂದ್ರಗಳು ಮಂಜೂರಾದಾಗ 18 ಮಕ್ಕಳು ಇರುವ ತುಯಲಹಳ್ಳಿಯಲ್ಲಿ ಕೇಂದ್ರ ಪ್ರಾರಂಭವಾಗಿರುತ್ತದೆ. ಈ ಕೇಂದ್ರವನ್ನು ಸ್ಥಳಾಂತರಿಸಲು ತಾಲ್ಲೂಕು ಪಂಚಾಯತಿಯ ಅನುಮತಿ ಕೋರಿದ್ದು, ಅನುಮತಿ ದೊರೆತ ನಂತರ ಹೆಚ್ಚು ಫಲಾನುಭವಿಗಳು ಇರುವ ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರವನ್ನು ನಡೆಸಲಾಗುವುದು.

ಉ) ಅನುಮತಿ ದೊರೆತ ನಂತರ ತುಯಲಹಳ್ಳಿ ಪಾಳ್ಯಕ್ಕೆ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರಿಸಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ಅಂಗವಿಕಲರಿಗೆ ಸೈಕಲ್ ವಿತರಣೆ

736(1309) ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕಿನಿಂದ ಎಷ್ಟು ಮಂದಿ ಅಂಗವಿಕಲರು ಮೂರು ಚಕ್ರದ ಸೈಕಲಿಗೆ ಅರ್ಜಿ ಹಾಕಿರುವರು?

ಆ) ಅವರಿಗೆ ಸರಕಾರ ಯಾವಾಗ ಸೈಕಲ್‌ಗಳನ್ನು ವಿತರಣೆ ಮಾಡುವುದು?

ಇ) ಎಷ್ಟು ಜನರಿಗೆ ಸೈಕಲ್‌ಗಳನ್ನು ಕೊಡಲು ಉದ್ದೇಶಿಸಲಾಗಿದೆ.

ಈ) ಬಾಕಿ ಉಳಿಯುವ ಅರ್ಜಿಗಳೆಷ್ಟು (ವಿವರ ನೀಡುವುದು)?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಿಂದ 2001-02ನೇ ಸಾಲಿನಲ್ಲಿ 17 ಅಂಗವಿಕಲ ಅಭ್ಯರ್ಥಿಗಳು ಮೂರು ಚಕ್ರದ ಸೈಕಲಿಗೆ ಅರ್ಜಿ ಸಲ್ಲಿಸಿರುವರು.

ಆ) ಅವರಿಗೆ 25-3-02 ಹಾಗೂ 28-5-02 ರಂದು ಸೈಕಲ್‌ಗಳನ್ನು ವಿತರಣೆ ಮಾಡಲಾಗಿದೆ.

ಇ) 2002-03ನೇ ಸಾಲಿನಲ್ಲಿ ಇಲಾಖೆಯಿಂದ ತುರುವೇಕೆರೆ ತಾಲ್ಲೂಕಿನಲ್ಲಿ ಇಬ್ಬರು ಅಂಗವಿಕಲ ಫಲಾನುಭವಿಗಳಿಗೆ ತ್ರಿಚಕ್ರ ಸೈಕಲ್‌ಗಳನ್ನು ಕೊಡಲು ಉದ್ದೇಶಿಸಲಾಗಿದೆ.

ಈ) ಅನ್ವಯಿಸುವುದಿಲ್ಲ.

ವಿಶ್ವೇಶ್ವರ ನಾಲೆಯ ಆಧುನೀಕರಣ ಕಾಮಗಾರಿ ಗುತ್ತಿಗೆದಾರರಿಂದ ಹಣ ವಸೂಲಿ

737(1310) ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣರಾಜಸಾಗರ ನೀರಾವರಿ ಯೋಜನೆಯ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಕಾಮಗಾರಿಗೆ ನಿಗಧಿಪಡಿಸಿ ನೀಡಿದ್ದ ಗುತ್ತಿಗೆ ಮೊತ್ತವೆಷ್ಟು?

ಆ) ನಿಗಧಿಪಡಿಸಿದ್ದಕ್ಕಿಂತ ಹೆಚ್ಚಿಗೆ ಮೊತ್ತವನ್ನು ಈ ಕಾಮಗಾರಿಗಾಗಿ ನೀಡಲಾಗಿದೆಯೇ? ನೀಡಿದ್ದಲ್ಲಿ ಹೆಚ್ಚಿನ ಮೊತ್ತದ ಪ್ರಮಾಣವೆಷ್ಟು?

ಇ) ಹೆಚ್ಚುವರಿ ಕೆಲಸ ಹಾಗೂ ದರ ಏರಿಕೆಗೆ ಕಾರಣಗಳೇನು?

ಈ) ಈ ಹಣವನ್ನು ಗುತ್ತಿಗೆದಾರರಿಂದ ಹಿಂದಕ್ಕೆ ಪಡೆಯಲಾಗಿದೆಯೇ?

ಉ) ಹೆಚ್ಚು ಹಣ ಪಾವತಿಸಿದ ಇಲಾಖಾ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಕೃಷ್ಣರಾಜಸಾಗರ ಯೋಜನೆಯ ಆಧುನೀಕರಣ ಅಡಿಯಲ್ಲಿ ವಿಶ್ವೇಶ್ವರಯ್ಯ ಮುಖ್ಯ ನಾಲೆ, ಶಾಖಾ ನಾಲೆಗಳು, ವಿತರಣಾ ನಾಲೆಗಳು, ಸಂಪರ್ಕ ನಾಲೆ ಇತ್ಯಾದಿಗಳ ಆಧುನೀಕರಣದ ಕಾಮಗಾರಿಗಳನ್ನು 1979 ರಿಂದ ಕಾಮಗಾರಿವಾರು ಗುತ್ತಿಗೆ ಆಧಾರದ ಮೇರೆಗೆ ಕೈಗೆತ್ತಿಕೊಳ್ಳಲಾಗುತ್ತಿದೆ. ಕೆ.ಆರ್.ಎಸ್ ಆಧುನೀಕರಣ ಯೋಜನಾ ಕಾಮಗಾರಿಗಳಿಗೆ 79-80ರಲ್ಲಿ ರೂ. 14.80 ಕೋಟಿಗಳ ಅಂದಾಜಿನ ಮೊತ್ತಕ್ಕೆ ಮೂಲ ಯೋಜನೆಯನ್ನು ತಯಾರಿಸಲಾಗಿದ್ದು ನಂತರ ಯೋಜನೆಯ ಸ್ವರೂಪದಲ್ಲಿ ಆದ ಬದಲಾವಣೆಗಳಿಂದ ದಿನಾಂಕ: 6-3-87ರಲ್ಲಿ ರೂ .55.00 ಕೋಟಿಗಳಿಗೆ ಈ ಅಂದಾಜನ್ನು ಪರಿಷ್ಕರಿಸಲಾಯಿತು. ತದನಂತರ ಜನವರಿ 97ರಿಂದ ಜೂನ್ 97ರವರೆಗೆ ಕಾಲುವೆಯಲ್ಲಿ ನೀರನ್ನು ನಿಲ್ಲಿಸಿ ದೀರ್ಘಾವಧಿ ಕ್ಲೋಸರ್ ಅವಧಿಯಲ್ಲಿ ಹಲವಾರು ಹೆಚ್ಚುವರಿ ಕಾಮಗಾರಿಗಳನ್ನು ವಿ.ಸಿ.ನಾಲೆಯಲ್ಲಿ ಕೈಗೊಳ್ಳಲಾಯಿತು. ಈ ಹೆಚ್ಚುವರಿಯಿಂದ ಆಧುನೀಕರಣದ ಕಾಮಗಾರಿಯ ಪರಿಷ್ಕೃತ ಅಂದಾಜು ವೆಚ್ಚ ರೂ. 350.00 ಕೋಟಿಯಾಗಿರುತ್ತದೆ. ಗುತ್ತಿಗೆಗೆ ನೀಡಿದ ಮೊತ್ತ ರೂ. 275.45 ಕೋಟಿಗಳಾಗಿರುತ್ತದೆ.

ಆ) ವಿ.ಸಿ. ಆಧುನೀಕರಣ ಕಾಮಗಾರಿಯಲ್ಲಿ ಸಂಪರ್ಕ ನಾಲೆ ಸುರಂಗ ಕಾಮಗಾರಿಯ ಗುತ್ತಿಗೆದಾರರಿಗೆ ಹೆಚ್ಚಿಗೆ ಹಣ ಪಾವತಿ ಆಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಹೆಚ್ಚಿನ ಪಾವತಿಯನ್ನು ಗುರುತಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಸಿ.ಕೆ. ಬಾಲಕೃಷ್ಣ, ಇವರ ನೇತೃತ್ವದ ಸಮಿತಿಯನ್ನು ರಚಿಸಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಕಾರಣಗಳೇನೆಂದರೆ:-

1. ಮೂಲ ಅಂದಾಜಿನಲ್ಲಿ ಬಿಟ್ಟು ಹೋದ ಕೆಲವು ಕಾಮಗಾರಿಗಳನ್ನು ಸ್ಥಳ ಹಾಗೂ ತಾಂತ್ರಿಕ ಪರಿಶೀಲನೆ ಆಧಾರದ ಮೇಲೆ ತೆಗೆದುಕೊಂಡಿದ್ದರಿಂದ;

2. ಆರ್.ಸಿ.ಸಿ. ಸೇತುವೆಗಳ ನಿರ್ಮಾಣದ ಬದಲಿಗೆ ಸ್ಟೀಲ್ ಸೇತುವೆಗಳನ್ನು ನಿರ್ಮಿಸಿದ್ದರಿಂದ;

3. ಸೂಕ್ಷ್ಮ ಸ್ಥಳಗಳಲ್ಲಿ ಲೈನಿಂಗ್ ಮಾಡಿದ್ದರಿಂದ;

4. ಏರಿಗಳ ತೋಳುಗಳನ್ನು ಬಲವರ್ಧನೆಗೊಳಿಸಿದ್ದರಿಂದ;

5. ಅಡ್ಡಮೋರಿಗಳ ಕಾಲುವೆ ಕನೆಕ್ಷನ್‌ಗಳನ್ನು ನಿರ್ಮಿಸಿದ್ದರಿಂದ;

6. ಹೊಸದಾಗಿ ನೀರಿನ ನಿರ್ವಹಣೆಗೆ ಅನುಕೂಲವಾಗುವ ಹೆಡ್ ರೆಗ್ಯೂಲೇಟರ್ ಮತ್ತು ಕ್ರಾಸ್ ರೆಗ್ಯೂಲೇಟರ್‌ಗಳನ್ನು ನಿರ್ಮಿಸಿದ್ದರಿಂದ;

ಈ) ಈಗಾಗಲೇ ಸಂಪರ್ಕ ಸುರಂಗ ಮಾರ್ಗದ ಗುತ್ತಿಗೆದಾರರಿಂದ ರೂ. 1.01 ಕೋಟಿ ಹಿಂದಕ್ಕೆ ಪಡೆಯಲಾಗಿದೆ. ವಿಚಾರಣೆ ಸಮಿತಿಯ ವರದಿ ಬಂದ ನಂತರ ಬಾಕಿ ಹಣವನ್ನು ಹಿಂದಕ್ಕೆ ಪಡೆಯುವ ಕ್ರಮ ಜರುಗಿಸಲಾಗುವುದು.

ಉ) ವಿ.ಸಿ. ಆಧುನೀಕರಣದಡಿಯಲ್ಲಿ ನಿರ್ಮಾಣಗೊಂಡಿರುವ ಸಂಪರ್ಕ ನಾಲೆಯ ಸುರಂಗದ ಕಾಮಗಾರಿಯ ಬಗ್ಗೆ ನೀಡಿದ ವರದಿಯಂತೆ ಹೆಚ್ಚುವರಿ ಪಾವತಿಸಿರುವ ಬಗ್ಗೆ ಶ್ರೀ ಸಿ.ಕೆ. ಬಾಲಕೃಷ್ಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿನ ರಚಿಸಲಾದ ವಿಚಾರಣಾ ಅಂತಿಮ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗುಂಡ್ಲಪೇಟೆ ಟಿ.ಎ.ಪಿ.ಸಿ.ಎಂ.ಎಸ್ ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

739(582) ಶ್ರೀ ಮಹದೇವ್ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲಪೇಟೆ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಯುತ್ತಿದೆಯೇ?

ಆ) ವಿಚಾರಣೆ ಯಾವ ಹಂತದಲ್ಲಿದೆ?

ಇ) ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು) :

ಅ) ಹೌದು

ಆ) 1959ರ ಸಹಕಾರ ಸಂಘಗಳ ಕಾಯ್ದೆ ಕಲಂ 65ರ ಪ್ರಕಾರ ಪರಿವೀಕ್ಷಣೆ ಮುಕ್ತಾಯವಾಗಿದ್ದು, ಕಾಯ್ದೆ ಕಲಂ 64ರ ವಿಚಾರಣಾ ವರದಿಯು ಸ್ವೀಕೃತವಾಗಿರುತ್ತದೆ.

ಇ) ಪರಿವೀಕ್ಷಣಾ ವರದಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸಹಕಾರ ಸಂಘಗಳ ಕಾಯ್ದೆ ಕಲಂ 68 ರಡಿಯಲ್ಲಿ ಆದೇಶ ಹೊರಡಿಸಲಾಗಿದೆ. ಸಂಬಂಧಪಟ್ಟ ಸಂಘದ ನೌಕರರನ್ನು ಅಮಾನತ್ತಿನಲ್ಲಿಡಲಾಗಿದೆ. ಎರಡು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು, ಇದು ತನಿಖೆಯಲ್ಲಿರುತ್ತದೆ.

ಗುಂಡ್ಲಪೇಟೆ ತಾಲ್ಲೂಕಿನಲ್ಲಿ ಪಡಿತರ ಚೀಟಿ ವಿತರಣೆ.

740(583) ಶ್ರೀ ಮಹದೇವ್ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಲಾಗಿದೆಯೇ?

ಆ) ಗುರುತಿಸಿದ್ದರೆ, ಆ ಕುಟುಂಬಗಳ ಸಂಖ್ಯೆ ಎಷ್ಟು?